ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22372738, E-mail:karnregs@gmail.com

ಸಂ:ಗ್ರಾಅಪ:792:ಉಖಾಯೋ 2016 ದಿನಾಂಕ:12-01-2017

## ಅನಧಿಕೃತ ಟಿಪ್ಪಣಿ

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದಲ್ಲಿ ತೆರವಾಗಿರುವ ನಿರ್ದೇಶಕರ ಹುದ್ದೆಗೆ ಆಯ್ಕೆ ಮಾಡಲು ಸೂಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ ಪ್ರಕಟಣೆಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಪ್ರಕಟಣೆ ಸಂ: ಗ್ರಾಅಪ:792:ಉಖಾಯೋ:2016 ದಿ:27-09-2016

****

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದಲ್ಲಿ ತೆರವಾಗಿರುವ ನಿರ್ದೇಶಕರ ಹುದ್ದೆಗೆ ಆಯ್ಕೆ ಮಾಡಲು ಸೂಕ್ತ ಅಭ್ಯರ್ಥಿಗಳಿಂದ ಅರ್ಜಿಗಳ ಆಹ್ವಾನ ಕುರಿತು ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರಕಟಣೆಗಳನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪ್ರಕಟಣೆಗಳನ್ನು ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಯಲ್ಲಿ ಕನಿಷ್ಠ ಅಳತೆಯಲ್ಲಿ ದಿನಾಂಕ:13–01–2017 ಅಥವಾ ದಿನಾಂಕ:14–01–2017 ರ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

(ವಿಪುಲ್ ಬನ್ಸಲ್)
ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿ:**

ವಿಶೇಷ ಅಧಿಕಾರಿ, ಗಣಕಕೋಶ, ಗ್ರಾಅ&ಪಂ.ರಾಜ್ ಇಲಾಖೆ ಇವರಿಗೆ ಕಳುಹಿಸುತ್ತಾ, ಸದರಿ ಪ್ರಕಟಣೆಯನ್ನು ಇಲಾಖೆಯ ವೆಬ್ ಸೈಟಿನಲ್ಲಿ ಕೂಡಲೇ ಆರೋಹಿಸಲು ತಿಳಿಸಿದೆ.

NR//; All kan ltr

**Government of Karnataka**
**Rural Development Commissionerate**
**Rural Development and Panchayat Raj Department**
**2nd Floor, 3rd Gate, M.S. Building, Bangalore-1**
**Phone Number:080-22372738 E-mail:karnregs@gmail.com**

No. RDP 792 EGS 2016 Dated:12-01-2017

## Press Note

Inviting applications for appointment of Director of Social Audit (MGNREGS), Rural Development and Panchayath Raj Department.

Rural Development and Panchayath Raj Department inviting applications from eligible candidates for the post of Director, Directorate of Social Audit. The recruitment will be on contract basis for a period of 2 years. Interested candidates may obtain application format, details of age, educational/experience qualifications, emoluments, etc. from the website www.rdpr.kar.nic.in/socialaudit. Filled in applications along with necessary eligibility documents may be submitted on or before 02-02-2017 to the Rural Development and Panchayath Raj Department, Multistoried Building Bangalore-560001.

**(Vipul Bansal)**
Commissioner,
Rural Development
Rural Development & Panchayat Raj Dept.

HPN. Egn Ltr

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ (ಮಹಾತ್ಮಗಾಂಧಿ ನರೇಗಾ ಯೋಜನೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3ನೇ ಹಂತ, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
ದೂರವಾಣಿ ಸಂಖ್ಯೆ: 080-22372738, ಈ-ಮೇಲ್ : karnregs@gmail.com

ಸಂ:ಗ್ರಾಅಪ:792:ಸಾಪನಿ (ಉಖಾಯೋ) 2016 ದಿನಾಂಕ:12-01-2017

## ಪತ್ರಿಕಾ ಪ್ರಕಟಣೆ

ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ (ಮಹಾತ್ಮಗಾಂಧಿ ನರೇಗಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರ ಹುದ್ದೆ ನೇಮಕಾತಿಗಾಗಿ ಅರ್ಜಿ ಆಹ್ವಾನ ಪ್ರಕಟಣೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯಕ್ಕೆ (ಮಹಾತ್ಮಗಾಂಧಿ ನರೇಗಾ) ಗುತ್ತಿಗೆ ಆಧಾರದ ಮೇಲೆ 2 ವರ್ಷದ ಅವಧಿಗೆ ನಿರ್ದೇಶಕರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಹುದ್ದೆಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆ, ವಯಸ್ಸು, ವಿದ್ಯಾರ್ಹತೆ, ಅನುಭವ ಅರ್ಹತೆ, ಸಂಭಾವನೆ & ನಿಬಂಧನೆಗಳು, ಇತ್ಯಾದಿ ವಿವರಗಳನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ (ದೂರವಾಣಿ ಸಂ:080-22372738) ಅಥವಾ ವೆಬ್ ಸೈಟ್ www.rdpr.kar.nic.in/socialauditನಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಕಛೇರಿಗೆ ದಿನಾಂಕ:02-02-2017ರೊಳಗಾಗಿ ಸಲ್ಲಿಸಬಹುದಾಗಿದೆ. ನಿಗದಿತ ಗಡುವು ಮೀರಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(ವಿಪುಲ್ ಬನ್ಸಲ್)
ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

NR//; All kan ltr

# Government of Karnataka
Rural Development Commissionerate
Rural Development and Panchayat Raj Department
2nd Floor, 3rd Gate, M.S. Building, Bangalore-1
Phone Number:080-22372738 E-mail:karnregs@gmail.com


No. RDP 122 SAD(EGS)2013 Dated:12-01-2017

**Inviting applications for appointment of Director, Directorate of Social Audit (MGNREGS), Rural Development and Panchayath Raj Department.**

Whereas Government of India enacted the National Rural Employment Guarantee Act 2005 dated 07-09-2005 and framed Audit of Scheme Rules 2011 on 30-06-2011, in exercise of powers conferred in sub-section (1) of section-24 of MGNREG Act 2005. The Government of Karnataka framed and enacted scheme Implementation of Social Audit Rules 2011 in Karnataka through the notification No.RDPR:186(2)/MGNREGA 2011 Bangalore dt:10-01-2012, in exercise of the powers conferred under section-32 of MGNREGA 2005 and rule 3 of MoRD–GoI NOTIFIED Audit of Scheme Rules 2011. For the purpose of effectively conducting Social Audit. An independent Social Audit Directorate has already been constituted headed by a Director. A committee has been constituted under the chairmanship of Principal Secretary, Rural Development and Panchayath Raj Department to oversee the recruitment process.

Rural Development and Panchayath Raj Department invites applications from eligible candidates for the post of Director, Directorate of Social Audit. The recruitment will be on contract basis for a period of 2 years or the selected candidate attain the age of 65 years, whichever is earlier. The officers retired from All India Administrative Services or Karnataka State Administrative Services (Selection Grade) are eligible to apply.

## I. Age and Physical Fitness :-

1) The maximum age limit is 63 years.
2) The candidate shall be physically fit to carry out the responsibilities and the fitness certificate of the same shall be furnished.

## II. Educational Qualifications :-

1) The candidates should have at least a degree in any discipline from a recognized university. Computer Knowledge is desirable.
2) Candidates should have sound Knowledge of Kannada and English.

P.T.O

III. **Experience qualification**:-

1) Retired officers of All India Services or Karnataka State civil service (selection grade) who have put in a service of minimum 15 years.
2) Experience in the field of rights of rural folk, farmers, workers, women and public participation, of at least 15 years.

IV. **Duties and responsibilities** :-

1) All the duties and responsibilities of the Directorate as a whole, as mentioned in the Government Notification No.RDPR:186(1)/ MGNREGA 2011 Bangalore dt:10-01-2012.
2) Commitment of the basic principles of Social Audit, Transparency and Panchayath Raj System.
3) Working as per the terms and conditions as agreed to with the Directorate of Social Audit.

V. **Mode of Selection**:-

Applications received as per notification will be scrutinized by the state level Committee. The short list of eligible candidate in the ratio of 1:5 will be placed before the Selection Committee, for conducting interview.

VI. **Emoluments:-**

Rs.60,000/- per month + TA and other benefits /facilities as per the agreement with the society.

Interested candidates may obtain application format, details of age, educational/experience qualifications, emoluments, etc. from the office of the Commissioner, Rural Development (Phone No. 080-22372738) or from the website www.rdpr.kar.nic.in/socialaudit. Filled in applications along with necessary eligibility documents may be submitted on or before 02-02-2017 to the Commissioner, Rural Development and Panchayath Raj Department Bangalore-560001. Applications received after the due date will not be considered.

Candidates may contact Sri HP. Nagaraja, Consultant (Disciplinary) Mobile No. 9880850062 for further details.

**(Vipul Bansal)**
Commissioner,
Rural Development
Rural Development & Panchayat Raj Dept.

HPN. Egn Ltr

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ (ಮಹಾತ್ಮಗಾಂಧಿ ನರೇಗಾ ಯೋಜನೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3ನೇ ಹಂತ, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
ದೂರವಾಣಿ ಸಂಖ್ಯೆ: 080-22372738, ಈ-ಮೇಲ್ : karnregs@gmail.com

ಸಂಖ್ಯೆ: ಗ್ರಾಅಪ:792:ಸಾಪನಿ 2016 ದಿನಾಂಕ:12-01-2017

**ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ (ಮಹಾತ್ಮ ಗಾಂಧಿ ನರೇಗಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹುದ್ದೆ ನೇಮಕಾತಿಗಾಗಿ ಅರ್ಜಿ ಆಹ್ವಾನ ಪ್ರಕಟಣೆ**

ಭಾರತ ಸರ್ಕಾರವು ಹೊರಡಿಸಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005, ದಿನಾಂಕ:07-09-2005 ಮತ್ತು ದಿನಾಂಕ:30-06-2011ರ ಸಾಮಾಜಿಕ ಪರಿಶೋಧನಾ ನಿಯಮಗಳು 2011 ರಡಿಯಲ್ಲಿ ಕರ್ನಾಟಕ ಸರ್ಕಾರವು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸಾಮಾಜಿಕ ಪರಿಶೋಧನಾ ನಿಯಮಗಳನ್ನು ರೂಪಿಸಿ ದಿ:10-01-2012 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಧಿಸೂಚನೆ ಸಂಖ್ಯೆ ಆರ್‌ಡಿಪಿಆರ್/186-(2) ಎಂ.ಜಿ.ಎನ್.ಆರ್.ಇ.ಜಿ.ಎ-2011ನ್ನು ಹೊರಡಿಸಲಾಗಿರುತ್ತದೆ. ಈ ಕಾಯ್ದೆ ಮತ್ತು ನಿಯಮಗಳನ್ವಯ ಸಾಮಾಜಿಕ ಪರಿಶೋಧನೆ ಅನುಷ್ಠಾನಗೊಳಿಸಲು ಸ್ವಾಯತ್ತ ಸಂಸ್ಥೆಯೊಂದನ್ನು ರಚಿಸಲಾಗಿರುತ್ತದೆ, ಸದರಿ ಸಂಸ್ಥೆಗೆ ಸಂಬಂಧಿಸಿದಂತೆ ಎಲ್ಲಾ ಕಾರ್ಯನಿರ್ವಹಣೆಗಾಗಿ ನಿರ್ದೇಶಕರ ಒಂದು ಹುದ್ದೆಯನ್ನು ಸೃಜಿಸಿದ್ದು, ಈ ಹುದ್ದೆಯ ನೇಮಕಾತಿಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿರುತ್ತದೆ.

ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಈ ಹುದ್ದೆಗಾಗಿ ಕೆಳಕಂಡ ನಿಬಂಧನೆಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಈ ನೇಮಕಾತಿಯು 2 ವರ್ಷಗಳ ಅವಧಿ ಅಥವಾ ಆಯ್ಕೆಯಾದ ಅಭ್ಯರ್ಥಿಯ ವಯಸ್ಸು 65 ವರ್ಷ ಆಗುವವರೆಗೆ ಇದರಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವಂತದ್ದಾಗಿರುತ್ತದೆ. ಅಖಿಲ ಭಾರತ ಆಡಳಿತ ಸೇವೆಯ ಅಥವಾ ರಾಜ್ಯ ಆಡಳಿತ ಸೇವೆಯ (ಆಯ್ಕೆ ಶ್ರೇಣಿಯ) ನಿವೃತ್ತ ಅಧಿಕಾರಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

**ಅ) ವಯಸ್ಸಿನ ಮತ್ತು ದೈಹಿಕ ಸಾಮರ್ಥ್ಯದ ಅರ್ಹತೆಗಳು:-**

1) ಗರಿಷ್ಠ ವಯೋಮಿತಿ 63 ವರ್ಷದೊಳಗಿರತಕ್ಕದ್ದು.
2) ಅಭ್ಯರ್ಥಿಯು ಹುದ್ದೆಯ ಹೊಣೆಗಾರಿಕೆ ನಿರ್ವಹಿಸುವಷ್ಟು ದೈಹಿಕ ಸಾಮರ್ಥ್ಯ ಹೊಂದಿರತಕ್ಕದ್ದು ಮತ್ತು ದೈಹಿಕ ಸಾಮರ್ಥ್ಯದ ಧೃಡೀಕರಣ ಪತ್ರವನ್ನು ಸಲ್ಲಿಸುವುದು).

**ಆ) ಶೈಕ್ಷಣಿಕ ಅರ್ಹತೆಗಳು:-**

1) ಅಭ್ಯರ್ಥಿಯು ಕನಿಷ್ಠ ಅಂಗೀಕೃತ ವಿಶ್ವವಿದ್ಯಾಲಯದ ಪದವಿ ಹೊಂದಿರುವುದು.
2) ಕಂಪ್ಯೂಟರ್ ಬಳಕೆಯ ಸಾಮಾನ್ಯ ಪರಿಜ್ಞಾನ ಅಪೇಕ್ಷಣೀಯ.
3) ಆಂಗ್ಲಭಾಷೆ ಮತ್ತು ಸ್ಥಳೀಯ ಭಾಷೆಯಲ್ಲಿ ಪಾಂಡಿತ್ಯ ಹೊಂದಿರುವುದು.

ಮು.ತಿ.ನೋ

ಇ) **ಅನುಭವದ ಅರ್ಹತೆಗಳು:-**

1) ಅಖಿಲ ಭಾರತ ಸೇವೆಯ ನಿವೃತ್ತ ವ್ಯಕ್ತಿಯು ಅಥವಾ ರಾಜ್ಯ ಸೇವೆಯ ಆಯ್ಕೆ ಶ್ರೇಣಿ ನಿವೃತ್ತ ಅಧಿಕಾರಿಯು ಸರ್ಕಾರದ ಉನ್ನತ ಹುದ್ದೆಯಲ್ಲಿ ಕನಿಷ್ಠ 15 ವರ್ಷ ಅನುಭವ ಹೊಂದಿರುವುದು.

2) ಕಾರ್ಮಿಕರು, ರೈತರು, ಮಹಿಳೆಯರು ಗ್ರಾಮಸ್ಥರುಗಳ ಹಕ್ಕು, ಬಾಧ್ಯತೆಗಳ ಹಾಗೂ ಅವುಗಳ ನಿರ್ವಹಣೆಗೆ ಹಾಗೂ ಸಾರ್ವಜನಿಕ ಸಹಭಾಗಿತ್ವದ ಕ್ಷೇತ್ರದಲ್ಲಿ ಕನಿಷ್ಠ 15 ವರ್ಷಗಳ ಅನುಭವ ಹೊಂದಿರುವುದು ಅಪೇಕ್ಷಣೀಯ.

ಈ) **ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು:-**

1) ಈ ಹುದ್ದೆಯು ಸರ್ಕಾರದ ಅಧಿಸೂಚನೆ ಸಂ:ಆರ್‌ಡಿಪಿಆರ್/186/(1)ಎಂಜಿಎನ್‌ಆರ್‌ಇಜಿಎ:2011 ಬೆಂಗಳೂರು, ದಿನಾಂಕ:10-01-2012ರ ಭಾಗ-3 (1) ರಂತೆ ಜವಾಬ್ದಾರಿ ಮತ್ತು ಉತ್ತರದಾಯಿತ್ವ ಹೊಂದಿರುತ್ತದೆ.

2) ಸಾಮಾಜಿಕ ಪರಿಶೋಧನೆಯ ಮೂಲ ತತ್ವ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ನೀತಿಗೆ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕ್ರಿಯಾ ಶೀಲರಾಗಿ ತೊಡಗಿಸಿಕೊಳ್ಳಲು ಬದ್ಧರಾಗಿರುವುದು.

3) ಆಯ್ಕೆಯಾದವರು ಸಾಮಾಜಿಕ ಪರಿಶೋಧನಾ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಲಸ ನಿರ್ವಹಿಸಬೇಕಾಗಿರುತ್ತದೆ. ನಿರ್ದೇಶನಾಲಯದ ಷರತ್ತು ಮತ್ತು ನಿಬಂಧನೆಗಳಿಗೆ ಸಲಹಾ ಸೇವಾ ಒಪ್ಪಂದದನ್ವಯ ಕಾರ್ಯನಿರ್ವಹಿಸಲು ಬದ್ಧರಾಗಿರುವುದು.

ಉ) ಆಯ್ಕೆ ವಿಧಾನ:- ಪ್ರಕಟಣೆಯನುಸಾರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲಿಸಿ ರಾಜ್ಯಮಟ್ಟದ ಸಮಿತಿಯು 1:5ರ ಅನುಪಾತ ಸಂಕ್ಷೇಪಿತ ಪಟ್ಟಿಯನ್ನಾಧರಿಸಿ ಸೂಕ್ತ ದಿನಾಂಕದಂದು ಅಭ್ಯರ್ಥಿಗಳ ಸಂದರ್ಶನವನ್ನು ಏರ್ಪಡಿಸುವುದು.

ಊ) **ಪ್ರಸ್ತುತ ನಿಗಧಿಪಡಿಸಲಾಗಿರುವ ಮಾಸಿಕ ಗೌರವ ಸಂಭಾವನೆ:-**

ರೂ. 60,000/-ಗಳು (ಅರವತ್ತು ಸಾವಿರ ರೂಪಾಯಿಗಳು ಮಾತ್ರ) ಮತ್ತು ನಿಯಮಾನುಸಾರ ಪ್ರವಾಸ ಭತ್ಯೆ ಮತ್ತು ಸಂಸ್ಥೆಯೊಂದಿಗಿನ ಒಪ್ಪಂದದಂತೆ ಇತರೆ ಸೌಕರ್ಯ/ಸೌಲಭ್ಯಗಳು.

ಮೇಲ್ಕಂಡ ಸಾಮಾಜಿಕ ಪರಿಶೋಧನಾ ಸಂಸ್ಥೆಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವ ಅರ್ಹ ಅಭ್ಯರ್ಥಿಗಳು ನಿಗಧಿಪಡಿಸಿರುವ ಅರ್ಜಿಯನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ (ದೂರವಾಣಿ ಸಂ:080-22372738) ಅಥವಾ ವೆಬ್‌ಸೈಟ್ www.rdpr.kar.nic.in/socialaudit.ನಲ್ಲಿ ಪಡೆಯಬಹುದಾಗಿದೆ. ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಅವಶ್ಯಕ ಪೂರಕ ದಾಖಲೆಗಳೊಂದಿಗೆ ಮೊಹರಾದ ಲಕೋಟೆಯಲ್ಲಿರಿಸಿ ದಿನಾಂಕ:02-02-2017 ರೊಳಗಾಗಿ ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 3ನೇ ಹಂತ, 2ನೇ ಮಹಡಿ, ಬಹುಮಹಡಿ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇವರಿಗೆ ಖುದ್ದಾಗಿ/ಅಂಚೆ ಮೂಲಕ ತಲುಪುವಂತೆ ಸಲ್ಲಿಸುವುದು. ಅವಧಿ ಮೀರಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಶ್ರೀ ಹೆಚ್.ಪಿ.ನಾಗರಾಜ, ಸಮಾಲೋಚಕರು, ಶಿಸ್ತು ಕ್ರಮ ರವರನ್ನು ದೂರವಾಣಿ ಸಂ:9480850062 ರಲ್ಲಿ ಸಂಪರ್ಕಿಸಬಹುದಾಗಿದೆ.

(ವಿಪುಲ್ ಬನ್ಸಲ್)
ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

NR//; All kan ltr

**Application form for the post of Director, Directorate of Social Audit (MGNREGS), Rural Development and Panchayath Raj Department, Government of Karnataka**

| | | | |
|---|---|---|---|
| 1 | Name of the applicant | : | |
| 2 | Date of Birth and Age<br>(certificate to be enclosed) | : | |
| 3 | Educational Qualifications<br>(Certified copies of Degree/Master Degree certificate to be enclosed) | : | |
| 4 | Postal Address | : | |
| 5 | Telephone Numbers<br>Land Line /Mobile<br>e-Mail Address | : | |
| 6 | Physical fitness<br>(certificate to be enclosed) | : | |
| 7 | Computer Knowledge<br>(copies of the certificate to be enclosed) | : | |
| 8 | **Experience:-**<br>1) Period of Service in All India Administrative Service or Karnataka Administrative Service (selection grade) (Certified copies of experience to be enclosed).<br>2) Period of Service in Public Administrative in the capacity of an executive (Certified copies of experience to be enclosed) | : | |
| 9 | Details of present Employment | : | |
| 10 | Whether the candidate is ready to sign the service agreement with the Department | : | |

Place:
Date :

Signature of the candidate

HPN. Egn Ltr

**ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ (ಮಹಾತ್ಮಗಾಂಧಿ ನರೇಗಾ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ**
**ನಿರ್ದೇಶಕರ ಹುದ್ದೆ ನೇಮಕಾತಿಗಾಗಿ ಅರ್ಜಿ ನಮೂನೆ:-**

| | | | |
|---|---|---|---|
| 1 | ಅರ್ಜಿದಾರರ ಹೆಸರು | : | |
| 2 | ಹುಟ್ಟಿದ ದಿನಾಂಕ ಮತ್ತು ವಯಸ್ಸು (ದೃಢೀಕೃತ ದಾಖಲೆ ಲಗತ್ತಿಸುವದು) | : | |
| 3 | ಶೈಕ್ಷಣಿಕ ವಿದ್ಯಾರ್ಹತೆ (ಪದವಿ /ಸ್ನಾತಕೊತ್ತರ ಪದವಿಯ ದೃಡೀಕೃತ ದಾಖಲೆಗಳನ್ನು ಲಗತ್ತಿಸುವುದು) | : | |
| 4 | ಅಂಚೆ ವಿಳಾಸ | : | |
| 5 | ಸ್ಥಿರ ದೂರವಾಣಿ/ ಮೊಬೈಲ್ ಸಂಖ್ಯೆ/ ಇ-ಮೇಲ್ ವಿಳಾಸ | : | |
| 6 | ದೈಹಿಕ ಸಾಮರ್ಥ್ಯ (ದೃಡೀಕೃತ ಪ್ರತಿ ಲಗತ್ತಿಸುವುದು.) | : | |
| 7 | ಕಂಪ್ಯೂಟರ್ ಪರಿಜ್ಞಾನ (ದೃಡೀಕೃತ ಪ್ರತಿ ಲಗತ್ತಿಸುವುದು.) | : | |
| 8 | **ಅನುಭವದ ಅರ್ಹತೆಗಳು:-**<br>1) ಅಖಿಲ ಭಾರತ ಆಡಳತ ಸೇವೆ ಅಥವಾ ಕರ್ನಾಟಕ ಆಡಳಿತ ಸೇವೆ (ಆಯ್ಕೆ ಶ್ರೇಣಿ) ಯಲ್ಲಿ ಸಲ್ಲಿಸಿರುವ ಸೇವಾ ಅವಧಿ (ಸೇವಾ ದೃಢೀಕರಣ ಪತ್ರಗಳನ್ನು ಸಲ್ಲಿಸುವುದು)<br>2) ಸಾರ್ವಜನಿಕ ಆಡಳಿತ ಸೇವೆಯಲ್ಲಿ ಕಾರ್ಯನಿರ್ವಾಹಕ, ಸಾಮರ್ಥ್ಯದ ಹುದ್ದೆಯಲ್ಲಿ ಸಲ್ಲಿಸಿರುವ ಸೇವಾ ಅವದಿ (ಸೇವಾ ದೃಢೀಕರಣ ಪತ್ರಗಳನ್ನು ಸಲ್ಲಿಸುವುದು. | : | |
| 9 | ಹಾಲಿ ನಿರ್ವಹಿಸುತ್ತಿರುವ ಉದ್ಯೋಗದ ವಿವರ | | |
| 10 | ನಿರ್ದೇಶನಾಲಯದ ಷರತ್ತು ಮತ್ತು ನಿಬಂಧನೆಗಳ ಇಲಾಖಾ ಸೇವಾ ಒಪ್ಪಂದಕ್ಕೆ ಸಹಿ ಹಾಕಲು ಒಪ್ಪಿಗೆ ಇದೆಯೇ ? | | |

ಸ್ಥಳ ;
ದಿನಾಂಕ:

ಅಭ್ಯರ್ಥಿಯ ಸಹಿ

NR//; All kan ltr